



# ಬೆಳಕಿನ ಬಂಧಕ್ಕೆ ಕಲೆಯ ಅನುಬಂಧ!



**ಬೆಳಕಿನ ಹಬ್ಬಕ್ಕೆ, ಹಣತೆಯ ಸಾಲಿಗೆ ಹಾಡಿನ ಹೊನಲನ್ನು ಹರಿಸಿದರೆ ಹಬ್ಬದ ಸಂಭ್ರಮ ಇಮ್ಮಡಿ. ದೀಪಾವಳಿ ಹಬ್ಬದೊಂದಿಗೆ ಬರೀ ನಾದ–ಸುನಾದವಷ್ಟೇ ಅಲ್ಲ, ನೃತ್ಯ, ರಂಗಭೂಮಿ, ಯಕ್ಷಕಲೆ, ರಂಗೋಲಿ ಮುಂತಾದ ಲಲಿತಕಲೆಗಳೂ ಅನನ್ಯ ನಂಟನ್ನು ಹೊಂದಿವೆ. ಬೆಳಕಿನ ಬಂಧಕ್ಕೆ ಕಲೆಯ ಅನುಬಂಧವೂ ಸೇರಿ ಅಲ್ಲಿ ಅದ್ಭುತ ರಸಪಾಕವೇ ಸೃಷ್ಟಿಯಾಗುತ್ತದೆ.**

**■ ಉಮಾ ಅನಂತ್**

ಕಿವಿಗಿಂಪಾದ, ಮನಸ್ಸಿಗೆ ನೆಮ್ಮದಿ ನೀಡುವ, ಹೃದಯವನ್ನು ತಟ್ಟುವ ಸಂಗೀತ ನಾದಪ್ರಿಯರಿಗೆ ಮುದ ನೀಡಿದರೆ, ಕಣ್ಣುಗಳಿಗೆ ಹಿತವಾದ, ಮನಕ್ಕೆ ಹತ್ತಿರವಾದ ಭರತನಾಟ್ಯ, ಕೂಚಿಪುಡಿ, ಮೋಹಿನಿಯಾಟ್ಟಂ, ಕಥಕ್‌ನಂಥ ನೃತ್ಯಗಳು ಭಾವಲೋಕ ಸೃಷ್ಟಿಸುತ್ತವೆ. ಬೆಳಕಿನ ಹಬ್ಬವನ್ನು ವಿಜೃಂಭಿಸುವ ನಾಟಕಗಳು ಸೃಜನಶೀಲತೆಯನ್ನು ಅನಾವರಣಗೊಳಿಸಿದರೆ, ಯಕ್ಷ ದೀಪಾವಳಿ ಗಂಧರ್ವಲೋಕವನ್ನೇ ಧರೆಗಿಳಿಸುತ್ತದೆ. ಬೆಳಗ್ಗಿನ ಹೊತ್ತು ಮನೆ ಮುಂದೆ ನೀರು ಚಿಮುಕಿಸಿ ಚುಕ್ಕಿ, ಎಳೆಗಳಿಂದ ಕೂಡಿದ ನವಿರಾದ ರಂಗೋಲಿ ಕಣ್ಣಿಗೆ ಹಬ್ಬವನ್ನೇ ಉಂಟುಮಾಡುತ್ತದೆ. ಹೀಗಾಗಿ ದೀಪಾವಳಿಗೂ ಲಲಿತಕಲೆಗೂ ಎಲ್ಲಿಲ್ಲದ ಬಂಧ–ಅನುಬಂಧ.

## ಎಲ್ಲೆಲ್ಲೂ ಬೆಳಕು

ದೀಪಾವಳಿಯಲ್ಲಿ ಎಲ್ಲ ಲಲಿತಕಲೆಗಳೂ ವಿಜೃಂಭಿಸುತ್ತವೆ. ಕಲಾವಿದ ಬೆಳಕಿನ ಎಳೆಎಳೆಯನ್ನೂ ಕುಂಚದ ಮೂಲಕ ಚಿತ್ರಿಸಿ ಮೈಮನಕ್ಕೆ ಮುದ ನೀಡುತ್ತಾನೆ, ನಾಟಕಕಾರ ದೀಪಗಳ ಪ್ರಭಾವಳಿಯನ್ನು ರಂಗದ ಮೇಲೆ ಅಭಿನಯಿಸಿ, ಹಬ್ಬದ ಸೊಬಗನ್ನು ಅಭಿವ್ಯಕ್ತಿಸುತ್ತಾನೆ. ಯಕ್ಷಗಾನದಲ್ಲಂತೂ ಪಂಜು ರಾತ್ರಿಯಿಂದ ಮುಂಜಾನೆಯವರೆಗೂ ಪ್ರಜ್ವಲಿಸುತ್ತಲೇ ಇರುತ್ತದೆ. ಗಾಯಕ–ಗಾಯಕಿಯರು, ವಾದ್ಯ ಸಂಗೀತಗಾರರು ದೀಪಗಳ ಹಬ್ಬದ ವೈಭವವನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸುತ್ತಾ, ಕೇಳುಗರನ್ನು ಸೆಳೆಯುತ್ತಾರೆ.

ಕವಿಗಳು ದೀಪಾವಳಿ ಮೇಲೆ ನೂರಾರು ಹಾಡುಗಳನ್ನು ಬರೆದಿದ್ದಾರೆ. ವಾಗ್ಗೇಯಕಾರರು ಕೀರ್ತನೆ ರಚಿಸಿ, ಸ್ವರಮಟ್ಟುಗಳನ್ನು ಹಾಕಿ ನಾದ ರಸಧಾರೆ ಹರಿಸಿದ್ದಾರೆ. ಸೋರಟ್ ಅಶ್ವಥ್ ಸಾಹಿತ್ಯದ, ಎಂ. ವೆಂಕಟರಾಜು ಸಂಗೀತದ ಈ ಲಘು ಶಾಸ್ತ್ರೀಯ ಗೀತೆ ‘ನಾಡಿನಂದ ಈ ದೀಪಾವಳಿ ಬಂತು; ಸಂತೋಷ ತಾಳಿ ನಮ್ಮೀ ಬಾಳ ಕಾರಿರುಳ...’ ಹಾಡು ಎವರ್‌ಗ್ರೀನ್. ಈ ಹಾಡನ್ನು ಖ್ಯಾತ ಗಾಯಕಿಯರಾದ ಎಸ್. ಜಾನಕಿ ಮತ್ತು ಪಿ. ಸುಶೀಲ ಹಾಡಿದ್ದು, ದೀಪಾವಳಿ ಸಂದರ್ಭದಲ್ಲಿ ಹಬ್ಬದ ಸಂಭ್ರಮವನ್ನು ವರ್ಣಿಸುತ್ತದೆ.

ಸುಗಮ ಸಂಗೀತ ಗಾಯಕಿ ಕೆ.ಎಸ್. ಸುರೇಖಾ ಹಾಡಿರುವ ‘ಕಲ್ಲಿನ ಕಲ್ಲಿನ ಪಾದ; ಲಕ್ಷ್ಮೀ ಬಂದಳು ನೋಡೆ...’ ಹಾಡು ಬೆಳಕಿನ ಹಬ್ಬದ ಸಂದರ್ಭದಲ್ಲಿ ಲಕ್ಷ್ಮೀ ವೈಭವವನ್ನು ಸೊಗಸಾಗಿ ತೆರೆದಿಡುತ್ತದೆ. ಸುಗಮ ಸಂಗೀತದಲ್ಲಿ ದೀಪಾವಳಿ ಸೊಗಸನ್ನು ಬಿಂಬಿಸುವ ಇನ್ನಷ್ಟು ಹಾಡುಗಳೂ ಜನಪ್ರಿಯವೇ ಆಗಿವೆ.

‘ದೀಪ ದೀಪ ದೀಪ; ದೇದೀಪ್ಯಮಾನ ದೀಪ, ಬೆಳ್ಳಿಯ ಬೆಳಕನ್ನು ಚೆಲ್ಲುವ ದೀಪ, ಹೊನ್ನಿನ ಕಿರಣವ ಹೊಮ್ಮುವ ದೀಪ...’ ಆಹಾ.. ಅಜ್ಞಾನವನ್ನು ಕಳೆದು ಜ್ಞಾನದೀವಿಗೆಯನ್ನು ಬೆಳಗುವ ಬೆಳಕನ್ನು ಹಾಡಿನ ಮೂಲಕ ವರ್ಣಿಸಿದ ಪರಿಯೇ ಅನನ್ಯ. ಅಂದಹಾಗೆ ಈ ಹಾಡು ಖ್ಯಾತ ಸುಗಮ ಸಂಗೀತ ಗಾಯಕ ಉಪಾಸನಾ ಮೋಹನ ಅವರ ಸಂಗೀತ ನಿರ್ದೇಶನದಲ್ಲಿ ಗಾಯಕಿ ಲಲಿತಾ ಬೆಳವಾಡಿ ಹಾಡಿದ್ದಾರೆ.

‘ಹಣತೆ ಹಣತೆ ಬೆಳಕಿನಲ್ಲಿ ದೀಪಾವಳಿಯು ಬಂದಿದೆ; ವರುಷವೆಲ್ಲ ಹರುಷ ಚೆಲ್ಲಿ